# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002**

***ಪತ್ರಿಕಾ ಪ್ರಕಟಣೆ*** **ದಿನಾಂಕ: 22.03.2011**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯ ಟಿ.ದಾಸರಹಳ್ಳಿ ಕೆರೆಯಲ್ಲಿ ದಾಸರಹಳ್ಳಿ ಸರ್ವೆ ನಂ.24 ಮತ್ತು ಚೊಕ್ಕಸಂದ್ರ ಸರ್ವೆ ನಂ.5 ರಲ್ಲಿ ಒಟ್ಟು ವಿಸ್ತೀರ್ಣ 27 ಎಕರೆ 33 ಗುಂಟೆ ಇದ್ದು, ಇದರಲ್ಲಿ 4 ಎಕರೆ 19 ಗುಂಟೆ ಅನಧಿಕೃತ ಒತ್ತುವರಿಯಾಗಿರುತ್ತದೆ.

ಇಂದು ಪಾಲಿಕೆಯ ಯೋಜನೆ-2 (ಕೆರೆಗಳು) ವಿಭಾಗದ ವತಿಯಿಂದ ಹಾಗೂ ತಹಶೀಲ್ದಾರರು ಉತ್ತರ ತಾಲ್ಲೂಕು, ಬಿ.ಎಂ.ಟಿ.ಎಫ್. ಪಡೆ ಮತ್ತು ಸ್ಥಳೀಯ ಪೊಲೀಸರ ಸಹಕಾರದೊಂದಿಗೆ ಒಟ್ಟು 4 ಎಕರೆ 19 ಗುಂಟೆ ಅನಧಿಕೃತ ಒತ್ತುವರಿ ಹಾಗೂ ಅನಧಿಕೃತ 23 ವಾಣಿಜ್ಯ ಮತ್ತು ವಸತಿ ಕಟ್ಟಡಗಳನ್ನು ತೆರವುಗೊಳಿಸಿ, ಪಾಲಿಕೆಗೆ ಸುಮಾರು 30.00 ಕೋಟಿ ರೂ.ಗಳಷ್ಟು ಮೌಲ್ಯದ ಆಸ್ತಿಯನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಮುಖ್ಯ ಅಭಿಯಂತರರು, ಯೋಜನೆ-2 (ಕೆರೆಗಳು) ರವರು ತಿಳಿಸಿರುತ್ತಾರೆ.

**ಸಾರ್ವಜನಿಕ ಸಂಪರ್ಕಾಧಿಕಾರಿ**